

# ರಾಮಕೃಷ್ಣ ಮಿಷನ್, ಬೇಲೂರು ಮಠದಿಂದ ಫಾಲಿನ್ ಚಂಡಮಾರುತ ಪರಿಹಾರ ಕಾರ್ಯ

## ಒಂದು ಮನವಿ

೨೦೧೩ರ ಅಕ್ಟೋಬರ್ ಮಧ್ಯಭಾಗದಲ್ಲಿ ಭಾರತದ ಪೂರ್ವ ಕರಾವಳಿಯ ಮೇಲೆ ಫಾಲಿನ್ ಚಂಡಮಾರುತವು ಅಪ್ಪಳಿಸಿ, ವ್ಯಾಪಕವಾದ ವಿನಾಶವನ್ನು ಉಂಟುಮಾಡಿದ್ದು ತಮಗೆ ಗೊತ್ತಿರುವ ವಿಷಯವೇ ಆಗಿದೆ. ಫಾಲಿನ್ ಚಂಡಮಾರುತವು ಬಹು ದೊಡ್ಡದಾದ ವಿನಾಶವನ್ನು ಉಂಟುಮಾಡುವ ಸಾಮರ್ಥ್ಯ ಉಳ್ಳದ್ದು. ಅದು ೧೯೯೯ರಲ್ಲಿ ಒರಿಸ್ಸಾದ ಮೇಲೆ ಅಪ್ಪಳಿಸಿದ ಪ್ರಚಂಡ ಚಂಡಮಾರುತವನ್ನು ನೆನಪಿಗೆ ತರುತ್ತದೆ. ಸ್ಥಳೀಯ ಸರ್ಕಾರಗಳು ವ್ಯಾಪಕವಾದ ಜಾಗರೂಕತೆಯನ್ನು ವಹಿಸಿದ್ದರಿಂದ, ಈ ಬಾರಿ ಮಾನವ ಹಾನಿಯು ಅತ್ಯಂತ ಅಲ್ಪ ಪ್ರಮಾಣದಲ್ಲಿತ್ತು. ಆದರೂ ಆಂಧ್ರಪ್ರದೇಶ ಮತ್ತು ಒರಿಸ್ಸಾಗಳಲ್ಲಿ ಮನೆಮಟ್ಟುಗಳು ಮತ್ತು ಕಟ್ಟಡಗಳಿಗೆ ಭಾರೀಪ್ರಮಾಣದ ಹಾನಿಯುಂಟಾಗಿದೆ. ಅಲ್ಲದೆ, ಪರೋಕ್ಷವಾಗಿ ನೆರೆಯ ಪಶ್ಚಿಮಬಂಗಾಳದಲ್ಲಿಯೂ ಕೂಡ ಅಪಾರ ಹಾನಿಯುಂಟಾಗಿದೆ.

ಈ ಹಿಂದಿನ ಸಂದರ್ಭಗಳಂತೆ ಈಗಲೂ ಕೂಡ ರಾಮಕೃಷ್ಣ ಮಿಷನ್ ಪರಿಸ್ಥಿತಿಗೆ ಒಹಳ ಬೇಗ ಪ್ರತಿಕ್ರಿಯಿಸಿತು ಮತ್ತು ಸಂತ್ರಸ್ತಗೊಂಡ ಪ್ರದೇಶಗಳಲ್ಲಿ ಪರಿಹಾರ ಕಾರ್ಯವನ್ನು ಆರಂಭಿಸಿತು. ನಮ್ಮ ಸರ್ವೇಕ್ಷಣಾ ತಂಡದ ವರದಿಗಳ ಪ್ರಕಾರ, ಸ್ಥಳೀಯ ಸರ್ಕಾರವು ಬಹುತೇಕ ಸಂತ್ರಸ್ತ ಪ್ರದೇಶಗಳಲ್ಲಿ, ಆಹಾರ ಮತ್ತಿತರ ಅವಶ್ಯ ಸಾಮಗ್ರಿಗಳ ವಿತರಣೆಯನ್ನು ಮಾಡುವುದರ ಮೂಲಕ ಪರಿಹಾರ ಕಾರ್ಯವನ್ನು ನಡೆಸುತ್ತಿದೆ. ಆದರೆ, ತಾವು ತಲುಪಲು ಅಸಾಧ್ಯವಾಗಿರುವ ಕಡೆಗಳಲ್ಲಿ ಪರಿಹಾರ ಕಾರ್ಯವನ್ನು ನಡೆಸುವಂತೆ ಸರ್ಕಾರದವರು ನಮ್ಮನ್ನು ಕೇಳಿಕೊಂಡಿದ್ದಾರೆ. ಅದರಂತೆಯೇ, ನಮ್ಮ ವಿಶಾಖಪಟ್ಟಣ ಕೇಂದ್ರವು ಆಂಧ್ರಪ್ರದೇಶದ ಶ್ರೀಕಾಕುಲಂ ಜಿಲ್ಲೆಯ ಮೀನುಗಾರರಿಗೆ ಮೀನುಬಲೆಗಳನ್ನು ವಿತರಿಸಿದೆ ಮತ್ತು ಅವರ ಮೀನುಹಿಡಿಯುವ ದೋಣಿಗಳನ್ನು ರಿಪೇರಿ ಮಾಡಿಸಿಕೊಟ್ಟಿದೆ. ಹಾಗೆಯೇ ನಮ್ಮ ಭುವನೇಶ್ವರ, ಕೊಥಾರ್, ಪುರಿ ಮಠ ಮತ್ತು ಪುರಿ ಮಿಷನ್ ಕೇಂದ್ರಗಳು ಒರಿಸ್ಸಾ ರಾಜ್ಯಕ್ಕೆ ಸೇರಿದ ಮಯೂರಭಂಜ್ ಜಿಲ್ಲೆಯ ಬಾರಿಪದ, ಗಂಜಮ್ ಜಿಲ್ಲೆಯ ಗೋಪಾಲಪುರ ಹಾಗೂ ಬೆರ್ಹಾಮ್‌ಪುರ ಹಾಗೂ ಪುರಿ ಜಿಲ್ಲೆಯ ಚಿಲ್ಕಾ – ಈ ಪ್ರದೇಶಗಳಲ್ಲಿನ ಸಾವಿರಾರು ಸಂತ್ರಸ್ತ ಕುಟುಂಬಗಳಿಗೆ ಒಣಗಿದ ಆಹಾರ ಪದಾರ್ಥಗಳು, ಬಟ್ಟೆಗಳು, ಕಂಬಳಿಗಳು, ಪಾತ್ರೆಗಳು ಮುಂತಾದವನ್ನು ವಿತರಿಸಿವೆ. ಇದಲ್ಲದೆ ಪಶ್ಚಿಮ ಬಂಗಾಳದ ಹೌರಾ, ಹೂಗ್ಲಿ ಮತ್ತು ಪೂರ್ವ ಮೇದಿನಿಪುರ ಜಿಲ್ಲೆಗಳಲ್ಲಿ ನಮ್ಮ ಆಂಟ್‌ಪುರ ಮತ್ತು ತಾಮಲೂಕ್ ಕೇಂದ್ರಗಳು ಪ್ರಾಥಮಿಕ ಪರಿಹಾರಕಾರ್ಯವನ್ನು ನಡೆಸುತ್ತಿವೆ.

ಈ ಉದಾತ್ತ ಕಾರ್ಯಕ್ಕೆ ಈಗಾಗಲೇ ಕೊಡುಗೆ ನೀಡಿದವರಿಗೆ ನಾವು ಧನ್ಯವಾದಗಳನ್ನು ಸಮರ್ಪಿಸುತ್ತೇವೆ. ಹಾಗೆಯೇ, ಈ ಸೇವಾಕಾರ್ಯದಲ್ಲಿ ನಮ್ಮೊಡನೆ ಸಹಕರಿಸಬೇಕೆಂದು ನಮ್ಮ ಹಿತೈಷಿಗಳು ಮತ್ತು ಸ್ನೇಹಿತರನ್ನು ಆಹ್ವಾನಿಸುತ್ತೇವೆ. ಚೆಕ್ಕುಗಳು, ಡಿಮ್ಯಾಂಡ್ ಡ್ರಾಫ್ಟ್‌ಗಳು ಇವುಗಳನ್ನು "RAMAKRISHNA MISSION" ಹೆಸರಿಗೆ ಕೊಲ್ಕತಾದಲ್ಲಿ ಸಂದಾಯವಾಗುವಂತೆ ಬರೆಯಬೇಕು. ಈ ಎಲ್ಲ ದೇಣಿಗೆಗಳಿಗೆ Income tax under section 80-G of the I.T. Act (5vi) ಪ್ರಕಾರ ವರಮಾನ ತೆರಿಗೆ ವಿನಾಯತಿ ಇದೆ. ದೇಣಿಗೆಗಳನ್ನು ಈ ಕೆಳಗಿನ ವಿಳಾಸಕ್ಕೆ ಸ್ಪೀಡ್‌ಪೋಸ್ಟ್ ಅಥವಾ ಕೊರಿಯರ್ ಮೂಲಕ ಕಳಿಸಬಹುದು.

**The General Secretary, Ramakrishna Mission (Relief Section)**
**Belur Math, Howrah, West Bengal – 711 202**

ನವೆಂಬರ್ ೩, ೨೦೧೩
ಬೇಲೂರು ಮಠ, ಹೌರಾ

ಸ್ವಾಮಿ ಸುಹಿತಾನಂದ
ಪ್ರಧಾನ ಕಾರ್ಯದರ್ಶಿ

Managing Editor : Swami Muktidananda
Editor : Swami Vireshananda

Printed and Published by Swami Muktidananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.D-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020